ನವಿರವಿ, ಬಾಳೆಹೊನ್ನೂರು
*ಹಪ್ಪಳವನ್ನು ಸಪ್ಪಳ ಮಾಡದ ಹಾಗೆ ತಿನ್ನುವುದು ಹೇಗೆ?*



ಎರಡು ಸೌಟು ಬಿಸಿಬಿಸಿ ಸಾರನ್ನು ಹಪ್ಪಳದ ಮೇಲೆ ನಿಧಾನವಾಗಿ ಸುರಿಯಿರಿ, ನಂತರ ಕಾಗದ ಅಗಿದಂತೆ ಅಗಿದು ತಿನ್ನಿ!

ಕೆ.ಎಸ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ಮಾಸ್ಟರ್ ಹಿರಣ್ಣಯ್ಯನವರ ವಾಕ್ಚಾತುರ್ಯಕ್ಕೂ, ರಾಜಕಾರಣಿಗಳ ವಾಕ್ಚಾತುರ್ಯಕ್ಕೂ ಇರುವ ವ್ಯತ್ಯಾಸವೇನು?*
ರಾಜಕಾರಣಿಗಳದು ಕಿವಿಗೆ ತಲುಪುತ್ತದೆ, ಮಾಸ್ಟರ್‌ದು ಮನಕ್ಕೆ!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಸಿಹಿಯಿಲ್ಲದಿದ್ದರೂ ಮುತ್ತಿಗೇಕೆ ಸಿಹಿಮುತ್ತು ಅನ್ತಾರೆ ಸಾರ್?*
ಸಿಹಿ ಇರುತ್ತದೆ– ಮೊದಲು ಐಸ್‌ಕ್ರೀಮೋ, ಚಾಕ್ಲೇಟೋ ಕೊಡಿಸಿರಬೇಕಷ್ಟೆ!

ಕುಮಾರ ಚಲವಾದಿ, ಹೊಳೆನರಸಿಪುರ
*ಅಪ್ಪ ಮಗನಿಗೆ ಕೊಡಬಹುದಾದ ಗಿಫ್ಟ್ ಏನು ಮತ್ತು ಮಗ ಅಪ್ಪನಿಗೆ ಕೊಡಬಹುದಾದ ಗಿಫ್ಟ್ ಏನು?*
ನೆಮ್ಮದಿಯ ಮನೆ, ನೆಮ್ಮದಿಯ ಕೊನೆ.

ಮಹೇಶ ಈರಣ್ಣ, ಲಿಂಗಸೂಗೂರು
*ಹಣ ಬಲವೋ? ಜನ ಬಲವೋ?*



ಅದೆಂತೋ ಇರಲಿ; ಚುನಾವಣಾ ಸಮಯದಲ್ಲಂತೂ ಹಣ ಗಾಳ, ಜನ ಬಲಿ!

ಜಾಕೋಬ್ ಡಿಸೋಜ, ಕುರುವಳ್ಳಿ
*ಕೇಳುವುದಕ್ಕೂ, ಬೇಡುವುದಕ್ಕೂ ಏನು ವ್ಯತ್ಯಾಸ?*
ಇಂಪಾಗಿದ್ದರೆ ಕೇಳುತ್ತೇವೆ, Imp ಆಗಿದ್ದರೆ ಬೇಡುತ್ತೇವೆ.

ಎಚ್.ಆನಂದ್ ಕುಮಾರ್, ಚಿತ್ರದುರ್ಗ
*ರೂಪವನ್ನು ಶಾಪವೆಂದೂ, ಕುರೂಪವನ್ನು ತಿರಸ್ಕೃತವೆಂದೂ ಇಬ್ಬಗೆ ದ್ವಂದ್ವ ಉಂಟುಮಾಡುವ ಜಿಜ್ಞಾಸುಗಳಿಗೆ ತಮ್ಮ ಸ್ಟ್ರಾಂಗ್ ಸಲಹೆ?*
ಮುಖದ ಕಣ್ಣನ್ನು ಮುಚ್ಚಿ ಮನದ ಕಣ್ಣನ್ನು ತೆರೆದರೆ ವಿಶ್ವವೇ ನೆಮ್ಮದಿ ಕೊಡುವ ಚೆಲುವಿನ ತಾಣ.

ಬಿ.ವಿ. ನಾರಾಯಣ್, ಬೆಳಗೊಳ
*ಭಾವನೆಗಳಿಲ್ಲದೆ ಬದುಕಲು ಸಾಧ್ಯವಿಲ್ಲವೆ?*
ಖಂಡಿತ ಸಾಧ್ಯ; ಕ್ರಿಮಿಕೀಟಗಳು ಬದುಕುವುದೇ ಹಾಗೆ!

ಪಿ.ಜೆ. ರಾಘವೇಂದ್ರ, ಮೈಸೂರು
*ವ್ಯಾಲೆಂಟೈನ್ಸ್ ಡೇಗೂ, ಏಡ್ಸ್ ಡೇಗೂ ಏನಾದರೂ ಸಂಬಂಧವಿದೆಯೇ?*
ನಿನ್ನ ಪ್ರೀತಿ ನನ್ನ ತಿಂತು ಅನ್ನೋ ಗಾದೆ ಬಂದದ್ದೇ ಈ ಸಂಬಂಧದಿಂದಂತೆ!

ಪಿ.ಎಸ್. ಶ್ರೀವತ್ಸ, ಬೆಂಗಳೂರು
*ನಿಮ್ಮ ಉತ್ತರಾಧಿಕಾರಿಯ ಬಗ್ಗೆ ಚಿಂತಿಸಿದ್ದೀರಾ?*
ಖಂಡಿತ; ನಿರಂತರವಾಗಿ ಉತ್ತಮ ಉತ್ತರ ನೀಡುವುದು ಸಾಧ್ಯವಿಲ್ಲ. ಪೇಲವವಾದಾಗ ಲವಲವಿಕೆಗೆ ಜಾಗ ನೀಡಿ ನೇಪಥ್ಯಕ್ಕೆ ಸರಿಯುತ್ತೇನೆ.

ರಮೇಶ ಜಿ. ಬೊಂಗಾಳೆ, ಬೈಲಹೊಂಗಲ
*ಹಣದಿಂದ ಎಲ್ಲವನ್ನೂ ಕೊಳ್ಳುವಂತಿದ್ದರೆ ಏನಾಗುತ್ತಿತ್ತು ಸಾರ್?*
ಸಮಯಕ್ಕೆ ಬೇಕಾಗುವಷ್ಟು ಪ್ರೀತಿ, ಸೀರಿಯಲ್‌ಗೆ ತಕ್ಕಷ್ಟು ಅಳು, ರುಚಿಗೆ ತಕ್ಕಷ್ಟು ನಗೆ ಕೊಳ್ಳಬೇಕಾಗುತ್ತಿತ್ತು!

ವಿ. ಹಮೀದ್, ವಿಟ್ಲ
*ದೇವರನ್ನು ಒಲಿಸಿಕೊಳ್ಳಲು ತಪಸ್ಸು ಮಾಡುತ್ತಾರೆ; ಹೆಂಡತಿಯನ್ನು ಒಲಿಸಿಕೊಳ್ಳಲು?*
ದೇವನೂ ತಪಸ್ಸು ಮಾಡುತ್ತಿದ್ದಾನೆ, ಇನ್ನೂ ಫಲ ಕಂಡಿಲ್ಲ.

ವಿನೋದ ಪಿ.ಕೆ. ಬಿಜಾಪುರ
*ನಮ್ಮ ರಾಜಕಾರಣಿಗಳು ಸಹ ಹೆಣ್ಣು, ಹೊನ್ನು, ಮಣ್ಣಿನ ವ್ಯಾಮೋಹ ಬಿಟ್ಟರೆ ಏನಾಗಬಹುದು?*
ಕನಸು ಕಾಣುವುದು ತಪ್ಪಲ್ಲ, ಆದರೆ ಇದು ಮತಿಭ್ರಮಣೆ. ಶೀಘ್ರವೇ ಸಂಬಂಧಿತ ಆಸ್ಪತ್ರೆಗೆ ಸೇರಿಕೊಳ್ಳಿ. ವಿಶ್ ಯೂ ಎ ಸ್ಪೀಡೀ ರಿಕವರಿ!

## ಬಹುಮಾನಿತ ಪ್ರಶ್ನೆ

ಶೋಭಾ ಎಂ.ಆರ್. ಮರ್ಕುಲಿ
*ನಾವು ಹುಲಿ ಸಿಂಹಗಳಿಗೆ ಹೆದರಿ ಅವನ್ನು ಬೋನಿನಲ್ಲಿ ಹಾಕುತ್ತೇವೆ; ಆದರೆ ಸಣ್ಣ ಸೊಳ್ಳೆಗೆ ಹೆದರಿ ನಾವೇ ಪರದೆ ಕಟ್ಟಿಕೊಳ್ಳುತ್ತೇವಲ್ಲಾ?*
ಸೊಳ್ಳೆಗಳನ್ನೂ ಬೋನಿನಲ್ಲೇ ಹಾಕಬಹುದಿತ್ತು; ಆದರೆ ಪ್ರತಿ ಮನೆಗೂ ಬೇಕಾಗುವ ನೂರಾರು ಬೋನುಗಳನ್ನು ಇಟ್ಟುಕೊಳ್ಳಲು ಜಾಗ?

ಡೈರಿ ಬಿ. ವಿಶ್ವನಾಥ್, ಬೆಂಗಳೂರು
*ನಾಯಕರು ಏಕೆ ಡರ್ಟಿ ಆಗುತ್ತಿದ್ದಾರೆ?*
ಧರತೀ ಪುತ್ರ ನಾಲಿಗೆ ಜಾರಿದರೆ ಆಗುವುದೇ ಡರ್ಟಿ ಪುತ್ರ!

ಮಾಲತೇಶ ಶಾಂತಗೌಡ ಪಾಟೀಲ, ಹುಬ್ಬಳ್ಳಿ
*ಒಳ್ಳೆಯವರು ರಾಜಕೀಯಕ್ಕೆ ಬರೋದಿಲ್ಲ, ಕೆಟ್ಟವರು ರಾಜಕೀಯ ಬಿಡೋಲ್ಲ. ಹಾಗಾದರೆ ನಮ್ಮ ದೇಶ ಉದ್ಧಾರವಾಗೋದು ಯಾವಾಗ?*
ತಿಪ್ಪೆಯ ನಡುವೆಯೂ ಮಾಮರ ಬೆಳೆಯದೇ...? ಕೇಡಿಗಿಂತಲೂ ಒಳಿತು ಪ್ರಬಲವಾಗುವಂತೆ ನಾವು ಶ್ರಮಿಸಿದರೆ ಫಲ ನಿಶ್ಚಿತ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಬಾಲ ಇಲ್ಲದ ಮಂಗಕ್ಕೂ, ಪದವಿ ಇಲ್ಲದ ಮಂತ್ರಿಗೂ ಏನು ವ್ಯತ್ಯಾಸ?*



ಮಂಗಕ್ಕೆ ಬಾಲ ಇಲ್ಲದಿದ್ದರೂ ಹೃದಯ ಇರುತ್ತದೆ.

ಎನ್. ಗೋಪಾಲರಾವ್, ಬೆಂಗಳೂರು
*ಹೂವಿನಿಂದ ನಾರಿಗೆ ಸ್ವರ್ಗ ಎಂಬ ನಾಣ್ಣುಡಿಯಂತೆ ಲೇಖಕರು ಹೂವು ಆದರೆ ನಾರು ಯಾರು?*
ಪ್ರಕಾಶಕರು!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ನೀವು ಬುದ್ಧಿಜೀವಿಗಳೋ, ವಿಚಾರವಾದಿಗಳೋ, ತತ್ವಜ್ಞಾನಿಗಳೋ, ಅಥವಾ ದಾರ್ಶನಿಕರೋ?*
ನಾನು ಕೇವಲ ಒಂದು ಕನ್ನಡಿಯಷ್ಟೆ. ನಿಮ್ಮ ನಿಮ್ಮ ರೂಪ ಅದರಲ್ಲಿ ಕಾಣುತ್ತದೆ!

■ ರಾಮ್